ಆದೇಶ ನೀಡಿರುತ್ತೆ. ಸಹಕಾರ ಅಭಿವೃದ್ಧಿ ಅಧಿಕಾರಿ, ಅರಕಲಗೂಡು, ಇವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಿದ್ದು ವಿಚಾರಣೆಯಂ ಪ್ರಗತಿಯಲ್ಲಿರುತ್ತೆ. ಕಲಂ ೬೪ರ ವಿಚಾರಣೆ ಪೂರ್ಣಗೊಂಡು ವರದಿ ಬಂದ ನಂತರ ದುರುಪಯೋಗವಾದ ಹಣದ ಖಚಿತ ಮೊತ್ತ ಹಾಗೂ ಇತರ ವಿವರಗಳು ಲಭ್ಯವಾಗುತ್ತವೆ. ವರದಿ ಬಂದ ನಂತರ ತಪ್ಪಿತಸ್ಥರ ಮೇಲೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇದನ್ನು ಪೂರ್ತಿ ಮಾಡುವುದಕ್ಕೆ ಎಷ್ಟು ವರ್ಷ ಬೇಕಾಗುತ್ತದೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಆದಷ್ಟು ಬೇಗ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಬ್ಬ ಮನುಷ್ಯ ೧೪ ಲಕ್ಷ ರೂಪಾಯಿಗಳನ್ನು...

ಅಧ್ಯಕ್ಷರು.—ಕಾಲಿಂಗ್ ಅಟೆಂಷನ್ ಮೇಲೆ ವಕಾಲತ್ತು ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಜನರ ಪರವಾಗಿ ವಕಾಲತ್ತು ಮಾಡುತ್ತೇನೆ. ಈ ಕೃತ್ಯವಾದದ ಹಿಂದೆ ಗಣ್ಯವ್ಯಕ್ತಿಗಳು ಯಾರು ಇದ್ದಾರೆ ? ಇವರ ಹಿಂದೆ ಯಾರು ಇಲ್ಲದಿದ್ದರೆ ಇಂತಹ ಕೆಲಸ ಮಾತಲಂ ಸಾಧ್ಯವಾಗುವುದಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಧ್ಯಕ್ಷರೇ, ಮೆಲ್ನೋಟಕ್ಕೇ ಇದರ ಹಿಂದೆ ಯಾರು ಇದ್ದಾರೆ ಎಂದು ಕಂಡುಬರುವುದಿಲ್ಲ. ಇಷ್ಟು ಮಾತ್ರ ಸರ್ಕಾರದ ಪರವಾಗಿ ಹೇಳುತ್ತೇನೆ. ಈ ಬಗ್ಗೆ ವಿಚಾರಣೆಯನ್ನು ಆದಷ್ಟು ಬೇಗನೆ ಮಾಡಿಸಿ ತಪ್ಪಿತಸ್ಥರ ಮೇಲೆ ಕಠಿಣ ಕ್ರಮವನ್ನು, ತಪ್ಪು ಮಾಡಿದ್ದಾರೆಂದು ಕಂಡುಬಂದರೆ ಖಂಡಿತವಾಗಿ ತೆಗೆದುಕೊಳ್ಳುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರು ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆಂದು ನಿಮ್ಮ ಹೇಳಿಕೆಯಲ್ಲೇ ಹೇಳಿದ್ದೀರಿ. ಇದರಿಂದ ಹಣದ ದುರುಪಯೋಗ ಆಗಿದೆ ಎಂದೂ ಗೊತ್ತಾಗುವುದಿಲ್ಲವೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಇದನ್ನು ವಿಚಾರಣೆ ಹೇಳಬೇಕಲ್ಲವೇ ?

ಶ್ರೀ ಕೆ. ಹೆಚ್. ಪಾಟೀಲ್.—ನಿಯಮ ೬೪ರ ಪ್ರಕಾರ ಒಂದೆರಡು ತಿಂಗಳುಗಳ ಒಳಗೆ ಎನ್‌ಕ್ವೈರಿ ಮಾಡಬೇಕು. ಹಾಗೆ ಎನ್‌ಕ್ವೈರಿ ಮಾಡದೇ ಇರುವ ಅಧಿಕಾರಿಗಳ ಮೇಲೆ ಕೂಡಾ ಕ್ರಮ ತೆಗೆದುಕೊಳ್ಳಬೇಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಷ್ಟು ತಿಂದರೆ ತಕ್ಷಣ ಆಕ್ಷನ್ ತೆಗೆದುಕೊಳ್ಳುತ್ತೀರಿ ಎಂಬುದನ್ನಾದರೂ ಹೇಳಿ. ಇಲ್ಲಿ ೧೪ ಲಕ್ಷ ರೂಪಾಯಿ ದುರುಪಯೋಗವಾಗಿದೆ.

SRI P.G.R. SINDHIA.—Government will take suitable and timely action.

MATTER UNDER RULE 334

ಮಿತವೇತನ ಪದವೀಧರರ ಸೇವೆಯಂನ್ನು ಸಕ್ರಮಗೊಳಿಸುವುದು

SRI R. VENKATARAMAIAH.—In Karnataka State the Stipendiary Graduates who are about 8000 in number are yet to be absorbed. Since 10 years, they are struggling to get themselves absorbad. The Government which promised them several times to get them permanent jobs is yet unable to provide jobs. This is highly unfortunate. The Government has failed to keep up its promise. I request the Hon. Minister for Labour, now the Chief Minister to make a statement in this regard to fulfil their longstanding demand.

ಶ್ರೀ ಎ. ಲಕ್ಷ್ಮಿಸಾಗರ್ (ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ).— ಅಧ್ಯಕ್ಷರೆ

ಮಿತವೇತನ ಉದ್ಯೋಗ ಯೋಜನೆಯನ್ನು ರಾಜ್ಯದಲ್ಲಿ ಜನವರಿ ೧೯೭೮ ರಿಂದ ಜಾರಿಗೊಳಿಸಲಾಯಿತು. ಕುಟುಂಬದಲ್ಲಿ ಯಾರೂ ಸಂಪಾದಿಸುವ ಸದಸ್ಯರಿಲ್ಲದ ಹಾಗೂ ಕುಟುಂಬದ ವಾರ್ಷಿಕ ಆದಾಯ ರೂ. ೩,೬೦೦ ಗಳಿಗೆ ಕಡಿಮೆ ಇರುವ ಕುಟುಂಬದ ಯಾರಾದರೂ ಪದವೀಧರರು, ಸ್ನಾತಕೋತ್ತರ ಪದವೀಧರ ಅಥವಾ ಡಿಪ್ಲೊಮೋ ಪಡೆದ ಅಭ್ಯರ್ಥಿಗಳಿಗೆ ಮಾಹೆಯಾನ ರೂ. ೧೫೦ ರಂತೆ ಮಿತವೇತನ ಆಧಾರದ ಮೇಲೆ ನೇಮಿಸಿಕೊಳ್ಳಲಾಯಿತು. ಅಂದಿನ ಅವರ ಒಟ್ಟು ಸಂಖ್ಯೆ ೧೪,೨೭೩ ಇದ್ದು ಈಗ ೭,೪೭೩ ಕ್ಕೆ ಇಳಿದಿದೆ. ಅಂದರೆ ೬,೮೦೦ ಮಿತವೇತನ ಪದವೀಧರರು ಲೋಕ ಸೇವಾ ಆಯೋಗದ ಮುಖಾಂತರ ಅಯ್ಕೆ ಪ್ರಾಧಿಕಾರಗಳಿಂದ ಆಯ್ಕೆಗೊಂಡು 'ಸಿ' ಗುಂಪಿನ ಹುದ್ದೆಗಳಿಗೆ ಈಗಾಗಲೇ ಸರ್ಕಾರದ ಇಲಾಖೆಗಳಲ್ಲಿ ನೇಮಕಗೊಂಡಿದ್ದಾರೆ. ಎಲ್ಲಾ ಸ್ನೈಪಂಡರಿ ಪದವೀಧರರನ್ನು ಖಾಯಂ ಉದ್ಯೋಗಿಗಳಂತೆ ಮಾಡಲು ಸರ್ಕಾರವು ಕರ್ನಾಟಕ ನಾಗರೀಕ ಸೇವಾ (ವಿಶೇಷ) ನಿಯಮಾವಳಿಗಳು, ೧೯೮೫ನ್ನು ಹೊರಡಿಸಿದೆ. ಈ ನಿಯಮಾವಳಿಗಳ ಪ್ರಕಾರ ಸರ್ಕಾರದ ವಿವಿಧ ಇಲಾಖೆಗಳಲ್ಲಿರುವ 'ಸಿ' ಗುಂಪಿನ ಹುದ್ದೆಗಳಲ್ಲಿ ಶೇಕಡ ೫೦ ರಷ್ಟು ಹುದ್ದೆಗಳನ್ನು ಸ್ನೈಪಂಡರಿ ಪದವೀಧರರಿಗೆ ಮತ್ತು ಸ್ಥಳೀಯ ಅಭ್ಯರ್ಥಿಗಳಿಗೆ ಕಾದಿರಿಸಲು ಮತ್ತು ಪದೋನ್ನತಿಯಲ್ಲಿ ರಿಯಾಯಿತಿಯನ್ನು ನೀಡಲಾಗಿದೆ. ಆದ್ದರಿಂದ ಪ್ರಾರಂಭದಲ್ಲಿ ಸ್ನೈಪಂಡರಿ ಪದವೀಧರರ ಸಂಖ್ಯೆ ೧೪,೨೭೩ ಇದ್ದದ್ದು ಈಗ ೭,೪೭೩ ಕ್ಕೆ ಇಳಿದಿದೆ. ಅಧಿಸೂಚನೆ ಸಂಖ್ಯೆ ಡಿಪಿಎಆರ್ ೪೮ ಎಸ್ಎಲ್ಸಿ ೮೬ ದಿನಾಂಕ ೪-೬-೮೭ರ ಪ್ರಕಾರ, ಮಿತವೇತನ ಪದವೀಧರರಿಗೆ ಶೇಕಡ ೪೦ ರಷ್ಟು ಹುದ್ದೆಗಳನ್ನು ನೇರ ನೇಮಕಾತಿಗಾಗಿ ಕಾದಿರಿಸಲಾಗಿದೆ.

ಸ್ನೈಪಂಡರಿ ಪದವೀಧರರನ್ನು ಖಾಯಂಗೊಳಿಸುವ ಉದ್ದೇಶದಿಂದ ಅವರು ಯೋಜನೆಗೆ ಸೇರಿದ ದಿನಾಂಕದ ಆಧಾರದ ಮೇಲೆ ಹಿರಿತನವನ್ನು ಗೊತ್ತುಪಡಿಸಿ, ರಾಜ್ಯ ಜೇಷ್ಠತಾಪಟ್ಟಿಯನ್ನು ಗಣಕ ಯಂತ್ರದ ಮೂಲಕ ತಯಾರಿಸಲಾಗಿದೆ. ವಿದ್ಯಾರ್ಹತೆ ಮತ್ತು ಅವರ ಜೇಷ್ಠತೆಯ ಆಧಾರದ ಮೇರೆಗೆ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 'ಸಿ' ಗುಂಪಿನ ಹುದ್ದೆಗಳಿಗೆ ಹೆಸರುಗಳನ್ನು ಸೂಚಿಸುವುದಕ್ಕೆ ಈಗಾಗಲೇ ಕ್ರಮವನ್ನು ತೆಗೆದುಕೊಳ್ಳಲಾಗಿದೆ.

ಮೇಲೆ ಹೇಳಿರುವ ಹಿನ್ನೆಲೆಯಲ್ಲಿ ಮಿತವೇತನ ಪದವೀಧರರನ್ನು ಖಾಯಂಗೊಳಿಸುವ ಬಗ್ಗೆ ಸರ್ಕಾರದಿಂದ ಎಲ್ಲಾ ಪ್ರಯತ್ನಗಳನ್ನು ಮಾಡಲಾಗಿದೆ. ಮಿತವೇತನ ಪದವೀಧರರಿಗೆ ಶೇಕಡ ೪೦ ರಷ್ಟು ಹುದ್ದೆಗಳನ್ನು ತುಂಬುವುದಕ್ಕಾಗಿ ವಿವಿಧ ನೇಮಕಾತಿ ಪ್ರಾಧಿಕಾರಗಳಿಂದ ಬಂದಿರುವ ಸುಮಾರು ೮೫೦ ಹುದ್ದೆಗಳಿಗೆ ಮಿತವೇತನ ಪದವೀಧರರ ಹೆಸರನ್ನು ಸೂಚಿಸುವ ಕ್ರಮವು ಮುಕ್ತಾಯದ ಹಂತದಲ್ಲಿದೆ. ಅತಿ ಶೀಘ್ರದಲ್ಲೇ ಈ ಹುದ್ದೆಗಳ ಹೆಸರುಗಳನ್ನು ಸೂಚಿಸಲಾಗುವುದು. ಇಂಥಿಷ್ಟೇ ಅವಧಿಯಲ್ಲಿ ಇವರ ಸೇವೆಯನ್ನು ಖಾಯಂ ಮಾಡುವ ಬಗ್ಗೆ ಹೇಳಲು ಸಾಧ್ಯವಾಗುವುದಿಲ್ಲ. ಏಕೆಂದರೆ ಸ್ನೈಪಂಡರಿ ಪದವೀಧರರ ಸೇವೆಯನ್ನು ಖಾಯಂಗೊಳಿಸುವ ಪ್ರಶ್ನೆಯು ನೇಮಕಾತಿಯ ಹುದ್ದೆಯ ಸಂಖ್ಯೆಯನ್ನು ಅವಲಂಬಿಸಿದೆ.

೨ ಭೂ ಸುಧಾರಣಾ ಕಾಯ್ದೆ ಪ್ರಕಾರ ಕೃಷಿ ಕೂಲಿಕಾರರಿಗೆ ಅವರು ವಾಸಿಸುವ ಜಾಗದ ಹಕ್ಕು ನೀಡುವ ಬಗ್ಗೆ.

ಶ್ರೀಮತಿ ಮನೋರಮಾ ಮಾಧ್ವರಾಜ್.—ಮಾನ್ಯ ಅಧ್ಯಕ್ಷರೆ, ಕರ್ನಾಟಕ ಭೂಸುಧಾರಣಾ ಕಾಯಿದೆಯ ಪ್ರಕಾರ ಕೃಷಿ ಕೂಲಿಕಾರರಿಗೆ ಅವರ ವಾಸದ ಜಾಗದ ಹಕ್ಕು ನೀಡುವ ವ್ಯವಸ್ಥೆ ಇದೆ. ಆದರೆ ಅನೇಕ ಮಂದಿ ಕೃಷಿ ಕೂಲಿಕಾರರು ಅವಿದ್ಯಾವಂತರಾದ ಕಾರಣ ೨-ಎ ನಮೂನೆ ಅರ್ಜಿ ಸಲ್ಲಿಸುವ ಬದಲು ೭ನೇ ನಮೂನೆ ಅರ್ಜಿ ಸಲ್ಲಿಸಿದ್ದರಿಂದ ಹಕ್ಕಿನ ಬೇಡಿಕೆಯನ್ನು ತಿರಸ್ಕರಿಸಲ್ಪಟ್ಟಿತ್ತು. ಅನೇಕ ಕಡೆಗಳಲ್ಲಿ ದಾನಿಗಳು ತಾವಾಗಿಯೇ ಭೂಮಿ ನೀಡುವೆವೆಂಬ ಆಶ್ವಾಸನೆ ನೀಡಿ ನಂಬಿಸಿ, ಅರ್ಜಿ ಹಾಕಲು ಬಿಡಲಿಲ್ಲ. ಈಗ ಅವರನ್ನು ಆ ಜಾಗದಿಂದ ಓಡಿಸುವ ಸನ್ನಾಹ ನಡೆಯಬಹುದಿದೆ. ಗೇಣಿದಾರ ಒಕ್ಕಲುಗಳಿಗೆ ೭ನೇ ನಮೂನೆ ಅರ್ಜಿ ಸಲ್ಲಿಸಲು ಸಮಯಾವಕಾಶ ವಿಸ್ತರಿಸಲಾಗಿತ್ತು. ಈ ಅವಕಾಶ ೨-ಎ ನಮೂನೆ ಅರ್ಜಿದಾರರಿಗೆ ಸಾಕಷ್ಟು